VIJAYAKUMAR KANNUR
Digitally signed by VIJAYAKUMAR KANNUR
Date: 2026.06.23 10:49:23 +0530



**<u>ಪ್ರಧನಾ ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ ಇವರ ನ್ಯಾಯಾಲಯ, ಮುಧೋಳ</u>**

**<u>ಸಾಕ್ಷಿಗೆ ಇಂದು ದಿನಾಂಕ 22.06.2026 ರಂದು ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲುಃ ಪ್ರತಿವಾದಿ 1, 3, 4 ರವರ ಪರ ಶ್ರೀ ಕೆ ಕೆ ಜೆ ವಕೀಲರಿಂದ</u>**

ನನ್ನ ಸ್ವಂತ ಊರು ಮೇಟಗುಡ್ಡ ಗ್ರಾಮ. ನಾನು 8 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುವೆನು. ವಾದಿ ತನ್ನ ಗಂಡನ ಸಹೋದರನ ಹೆಂಡತಿ ಮತ್ತು ಮಕ್ಕಳ ವಿರುದ್ದ ದಾಖಲು ಮಾಡಿರುವಳು. ಪ್ರತಿವಾದಿ 2 ರಿಂದ 5 ರವರ ಹೆಸರುಗಳು ನನಗೆ ಹೇಳಲು ಆಗುವುದಿಲ್ಲ. ದಾವಾ ಆಸ್ತಿ ಸರ್ವೇ ನಂಬರ್ 69/1. ಸದರಿ ಜಮೀನಿನ ಪೂರ್ವಕ್ಕೆ ತಮ್ಮಣ್ಣ ಮಾಸರೆಡ್ಡಿ , ಪಶ್ಚಿಮಕ್ಕೆ ಕಲ್ಲಪ್ಪ ನಾಯಕರ ಜಮೀನು, ದಕ್ಷಿಣಕ್ಕೆ ತಮ್ಮಣ್ಣ ಮಾಸರೆಡ್ಡಿ ಇವರ ಜಮೀನು ಮತ್ತು ಉತ್ತರ ದಿಕ್ಕಿಗೆ ರಸ್ತೆ ಇರುವುದು. ದಾವಾ ಆಸ್ತಿಯ ಒಟ್ಟು ವಿಸ್ತೀರ್ಣ 12 ಎಕರೆ 20 ಗುಂಟೆ ಇರುವುದು. ಈ ಜಮೀನಿನಲ್ಲಿ ಪಶ್ಚಿಮಕ್ಕೆ ವಾದಿಯ ಹಿಸ್ಸೆ, ಪೂರ್ವಕ್ಕೆ ಪ್ರತಿವಾದಿಯರ ಹಿಸ್ಸೆ ಇರುವುದು ಎಂದರೆ ಸರಿ. ವಾದಿಯ ಪಾಲಿನ ಹಿಸ್ಸೆಯ ಜಮೀನಿನಲ್ಲಿ ಒಂದು ಮನೆ ಇರುವುದು ಎಂದರೆ ಸರಿಯಲ್ಲ.

2. ವಾದಿ, ಪ್ರತಿವಾದಿಯರ ಪರಿಚಯ ನನಗೆ 30 ವರ್ಷಗಳಿಂದ ಇರುವುದು. ಈ ದಾವೆಯ ಎಲ್ಲಾ ಸಂಗತಿಗಳನ್ನು ತಿಳಿದುಕೊಂಡೆ ನಾನು ಸಾಕ್ಷಿ ನುಡಿಯುತ್ತಿರುವೆನು. ಈ ದಾವೆ ದಾಖಲು ಮಾಡಲು ವಕೀಲರಿಗೆ ನಾವೇ ಮಾಹಿತಿ ನೀಡಿರುವೆವು. ದಾವಾ ಆಸ್ತಿಯಲ್ಲಿ ಒಟ್ಟು 2 ಪಾಲು ಆಗಬೇಕು. ಪ್ರತಿವಾದಿ 1 ವಿನ ಗಂಡ ಮೃತ ಶಿವಪ್ಪ ಭೀವವ್ವಳಿಗೆ ರೂ. 20 ಲಕ್ಷ ಹಣ ನೀಡಿರುವಳು ಎಂದರೆ ಸರಿಯಲ್ಲ. ಭೀಮವ್ವಳಿಗೆ ಹಣ ನೀಡಿದ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ದಾವಾ ಜಮೀನಿನ ಮೇಲಿನ ಪಿಕೆಪಿ ಸೊಸೈಟಿಯ ಸಂಪೂರ್ಣ ಸಾಲವನ್ನು ಶಿವಪ್ಪ ಮರುಸಂದಾಯ ಮಾಡಿರುವನು ಎಂದರೆ ಸರಿಯಲ್ಲ, ವಾದಿಯು ಸಹ ಸಂದಾಯ ಮಾಡಿರುವನು. ವಾದಿ ಎಷ್ಟು ಸಾಲದ ಹಣ ಮತ್ತು ಪ್ರತಿವಾದಿಯರು ಎಷ್ಟು ಸಾಲದ ಹಣ ಮರುಸಂದಾಯ ಮಾಡಿರುವರು ಎಂದು ನನಗೆ ಹೇಳಲು ಆಗುವುದಿಲ್ಲ. ವಾದಿ ಮತ್ತು ಪ್ರತಿವಾದಿಯರ ಮಧ್ಯೆ ದಾವಾ ಆಸ್ತಿಯಲ್ಲಿ ಯಾವುದೇ ಪಾಲು ಆಗುವುದಿಲ್ಲ. ಪ್ರತಿವಾದಿಯರು ಈ ದಾವಾ ಜಮೀನಿನ ಪೂರ್ವ ದಿಕ್ಕಿನ ಭಾಗದಲ್ಲಿ ಇರುವರು

ಎಂದರೆ ಸರಿ. ವಾದಿಯು ದಾವಾ ಜಮೀನಿನ ಪಶ್ಚಿಮ ಭಾಗದಲ್ಲಿ ಇರುವರು ಎಂದರೆ ಸರಿ. ದಾವಾ ಜಮೀನಿಗೆ ಸಂಬಂಧಪಟ್ಟಂತೆ ADLR ಅವರು ಅಳತೆ ಮಾಡಿದ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ದಾವಾ ಆಸ್ತಿಗೆ ಸಂಬಂಧಪಟ್ಟಂತೆ ನ್ಯಾಯಾಲಯದಲ್ಲಿ ಎರಡು ದಾವೆಗಳು ಇರುವವು. ಆ ದಾವಾ ನಂಬರಗಳು ನನಗೆ ಹೇಳಲು ಬರುವುದಿಲ್ಲ.

3. ನಮ್ಮ ಗ್ರಾಮದಲ್ಲಿನ ತಮ್ಮಣ್ಣ ಸಾವಕಾರ ಎಂಬ ಹೆಸರಿನ ವ್ಯಕ್ತಿ ಪರಿಚಯ ಇರುವುದು. ಮೃತ ಶಿವಪ್ಪ ತಮ್ಮಣ್ಣ ಸಾವಕಾರ ಕಡೆಯಿಂದ ರೂ. 20 ಲಕ್ಷ ಹಣ ಪಡೆದುಕೊಂಡು ತನ್ನ ಸಹೋದರಿ ಭೀವವ್ವಳಿಗೆ ನೀಡಿದ ವಿಷಯ ನನಗೆ ಗೊತ್ತಿರುವುದಿಲ್ಲ. ನಾನು ವಾದಿಯ ಪರವಾಗಿ ಸಾಕ್ಷಿ ನುಡಿಯುತ್ತಿರುವೆನು. ನನ್ನ ಸಾಕ್ಷಿಯ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಬರೆಸಿ ಹಾಕಿರುವ ಸಂಗತಿಗಳ ಬಗ್ಗೆ ನನಗೆ ಮಾಹಿತಿ ಇರುವುದು. ನನ್ನ ಸಾಕ್ಷಿಯ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಬರೆಸಿ ಹಾಕಿರುವ ಸಂಗತಿಗಳ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ ಮತ್ತು ಅವು ನಿಜವಿರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯರ ಪರಿಚಯ ನನಗೆ ಇರುವುದಿಲ್ಲ ಎಂದರೆ ಸರಿಯಲ್ಲ.

<u>ಮರುವಿಚಾರಣೆಃ ಇರುವುದಿಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೆ. ಸರಿ ಇದೆ.

ಸಾಕ್ಷಿಯ ಸಹಿ

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಜೆ.ಎಂ.ಎಫ್.ಸಿ., ಮುಧೋಳ